


# ಎದೆಯೊಳಗಿನ ಅಗ್ಗಿಷ್ಟಿಕೆಗೆ ಚಳಿಯ ಕಚಗುಳಿ

‘ಚಳಿಗಾಲದ ತಾರಕ ಸ್ಥಿತಿಯಲ್ಲಿ ನನಗೆ ಕೊನೆಗೂ ಅರ್ಥವಾದ ಸಂಗತಿಯೆಂದರೆ, ನನ್ನೊಳಗೊಂದು ಅಜೇಯವಾದ ಬೇಸಗೆ ಅಡಗಿರುವುದು’ ಎನ್ನುತ್ತಾನೆ ಆಲ್ಬರ್ಟ್ ಕಮೂ. ಎಂಥ ಸತ್ಯವಲ್ಲವೇ – ಎದೆಯೊಳಗೆ ಬೇಸಗೆ ಇಲ್ಲದೆ ಹೋದರೆ ಚಳಿಯನ್ನು ಎದುರಿಸುವುದಾದರೂ ಹೇಗೆ? ಚಳಿ ರುಚಿಸುವುದಾದರೂ ಹೇಗೆ?

■ ಚಿತ್ರಗಳು: ಅನೂಪ್ ಆರ್. ತಿಪ್ಪೇಸ್ವಾಮಿ
ಬರಹ: ಪುಟ್ಟಲಕ್ಷ್ಮಿ

ಕನಸು ಕಾಣಲಿಕ್ಕೆ ಅತ್ಯಂತ ಪ್ರಶಸ್ತವಾದ ಸಮಯ ಯಾವುದು?

ಕನಸುಗಾರರಿಗೆ ಚಳಿಗಾಲಕ್ಕಿಂತಲೂ ಸೊಗಸಾದ ಕಾಲ ಮತ್ತೊಂದು ಸಿಗಲಿಕ್ಕಿಲ್ಲ. ಬೇಸಗೆಯ ಧಗೆಯಲ್ಲಿ ಕನಸುಗಳ ಮಾತಿರಲಿ, ಅನುದಿನದ ಅಂತರಗಂಗೆಯ ದಾಟಲು ಬೇಕಾದ ಜೀವನೋತ್ಸಾಹವೇ ಬತ್ತಿಹೋಗುತ್ತದೆ. ಇನ್ನು ಮಳೆಗಾಲ – ಪರಿಸರದಲ್ಲಿ ಹಸಿರನ್ನೂ ಹೊಸ ಉಸಿರನ್ನೂ ತುಂಬುವ ಮಳೆದಿನಗಳು ಮೋಹಕವಾಗಿದ್ದರೂ ಮಳೆಯ ಜೊತೆಗೆ ರಾಡಿಯೂ ರಚ್ಚೆಯೂ ತಳಕು ಹಾಕಿಕೊಂಡಿರುತ್ತದೆ. ಸೌಂದರ್ಯದ ಜೊತೆಗೆ ವಿಷಾದವನ್ನೂ ಜೊತೆಗಿಟ್ಟುಕೊಂಡಂತೆ ಮಳೆ ಕಾಣಿಸುತ್ತದೆ. ಈ ಕಾರಣದಿಂದಾಗಿಯೇ ಚಳಿಯ ಸಮಯ ಕನಸು ಕಾಣಲಿಕ್ಕೆ ಪ್ರಶಸ್ತವಾದುದು.

ನವಿಲುಗರಿಯೊಂದು ಕಣ್ಣೆವೆಗಳ ಸೋಕಿದಂತೆ ಚಳಿಗಾಲ ನಿಧಾನಕ್ಕೆ ಅಡಿಯಿಡುತ್ತಿದೆ. ಕೆಲವು ವರ್ಷಗಳ ಹಿಂದಷ್ಟೇ ನವೆಂಬರ್ ಬಂತೆಂದರೆ ಚಳಿ ಬಾಲ್ಯದಿಂದ ತಾರುಣ್ಯಕ್ಕೆ ಕಾಲಿಟ್ಟಂತೆ ಕಾಣಿಸುತ್ತಿತ್ತು. ಎಳೆಯರಿಂದ ಹಿರಿಯರವರೆಗೆ ಎಲ್ಲರೂ ಬೆಚ್ಚನೆ ವಸ್ತ್ರಗಳನ್ನು ಧರಿಸಿ ಚಳಿಯ ಅಪ್ಪುಗೆಯಿಂದ ಪಾರಾಗಲು ಹವಣಿಸುತ್ತಿದ್ದರು. ಆದರೆ, ಚಳಿ ಎನ್ನುವ ಮಾಯಾಂಗನೆ ಯಾವುದೋ ಮಾಯೆಯಲ್ಲಿ ಆಲಿಂಗಿಸಿಕೊಂಡಾಗ, ನಡುಗದವರು, ಗದಗುಟ್ಟದವರು ಈ ಲೋಕದೊಳಗೆ ಇರುವರೆ?

ಚಳಿಯನ್ನು ಹಿತವಾಗಿಸಿಕೊಳ್ಳಲು ದಾರಿ ಒಂದೆರಡಲ್ಲ. ಬೀದಿಗಳಲ್ಲಿ ತರಗು–ಪುಳ್ಳೆಗಳ ಒಟ್ಟಾಗಿಸಿ ಮೈ ಕಾಯಿಸಿಕೊಳ್ಳುವವರು ಹಳ್ಳಿಗಳಲ್ಲೂ ಇದ್ದಾರೆ, ನಗರಗಳಲ್ಲೂ ಇದ್ದಾರೆ. ಸ್ವಾದಿಷ್ಟವಾದ ತಿನಿಸನ್ನೋ

(8ನೇ ಪುಟ ನೋಡಿ)